ಸಮುದ್ರದಲ್ಲಿ ಸಾವಿಗೀಡಾದವರ ಸಂಖ್ಯೆ

572 (400) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷದಿಂದ ಪ್ರಕೃತಿ ವಿಕೋಪದಿಂದ ಸಮುದ್ರದಲ್ಲಿ ಸಾವಿಗೀಡಾದವರ ಸಂಖ್ಯೆ ಎಷ್ಟು;

ಆ) ಆ ಬಗ್ಗೆ ನೀಡಿದ ಪರಿಹಾರ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ರಮೇಶ್ ಏ. ಜಿಗಜಿಣಗಿ (ಕಂದಾಯ ಸಚಿವರು):

ಅ) 14 ಮಂದಿ ಮೃತಪಟ್ಟಿರುತ್ತಾರೆ.

ಆ) ಎಲ್ಲಾ 14 ಮೃತ ಪ್ರಕರಣಗಳು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿಯೇ ಸಂಭವಿಸಿರುತ್ತದೆ. ಈ ಪೈಕಿ 13 ಪ್ರಕರಣಗಳಲ್ಲಿ ನಿಯಮಾನುಸಾರ ಮೃತರ ಹತ್ತಿರದ ವಾರಸುದಾರರಿಗೆ, ತಲಾ ರೂ. 1-00 ಲಕ್ಷದಂತೆ ಒಟ್ಟು ರೂ. 13.00 ಲಕ್ಷಗಳ ಅನುಕಂಪ ಭತ್ಯೆಯನ್ನು ವಿತರಿಸಿದೆ. ಉಳಿದ ಒಂದು ಪ್ರಕರಣದಲ್ಲಿ ಮೃತ ದೇಹ ಪತ್ತೆಯಾಗದ ಕಾರಣ ಪರಿಹಾರ ನೀಡಿರುವುದಿಲ್ಲ.

ರಾಜ್ಯದ ಜಿಲ್ಲೆಗಳ ಪುನರ್-ವಿಂಗಡಣೆ

573 (429) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಿಲ್ಲೆಗಳ ಪುನರ್- ವಿಂಗಡಣೆ ಬಗ್ಗೆ ಸರ್ಕಾರದವರ ನಿಲುವೇನು;

ಆ) ರಾಜ್ಯದಲ್ಲಿ ಜಿಲ್ಲೆಗಳ ಪುನರ್- ವಿಂಗಡಣೆ ಘೋಷಣೆ ಮಾಡದಿರಲು ಕಾರಣವೇನು; ಮತ್ತು ಎಂದು ಘೋಷಣೆಯನ್ನು ಮಾಡಲಾಗುವುದು?

ಶ್ರೀ ರಮೇಶ್ ಏ. ಜಿಗಜಿಣಗಿ (ಕಂದಾಯ ಸಚಿವರು):

ಅ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಕುಂದಾಪುರ ತಾಲ್ಲೂಕಿನ ಅಕ್ರಮ- ಸಕ್ರಮ ಮಂಜೂರಾತಿ ಕುರಿತು

574 (523) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?